# ಪರಭಾಷೆಯಿಂದ ಕನ್ನಡಕ್ಕೆ ಪ್ರವೇಶ

**ತೇಜಸ್ ಗೌಡ**
ಸ್ಟಾರ್ ಸುವರ್ಣದ 'ಆರತಿಗೊಬ್ಬ ಕೀರ್ತಿಗೊಬ್ಬ'ದ ವಿಜಯ್–ಅಜಯ್



◆ **ಏನಿದು ಆರತಿಗೊಬ್ಬ ಕೀರ್ತಿಗೊಬ್ಬ ಎಂದರೆ?**

ಉಮಾಶ್ರೀ ಅಮ್ಮನಿಗೆ ಅವಳಿ ಮಕ್ಕಳು. ಒಬ್ಬ ನಗರದಲ್ಲಿ ಬೆಳೆಯುತ್ತಾನೆ. ಇನ್ನೊಬ್ಬ ಹಳ್ಳಿಯಲ್ಲಿ ಹೆತ್ತಮ್ಮನ ಜೊತೆ ಬೆಳೆಯುತ್ತಾನೆ. ನಗರದಲ್ಲಿ ಬೆಳೆದವ ವಿಜಯ್ ಓದಿ ವೈದ್ಯನಾಗುತ್ತಾನೆ. ಹಳ್ಳಿಯಲ್ಲಿ ಬೆಳೆದ ಅಜಯ್ ಶಿಕ್ಷಣದಿಂದ ವಂಚಿತನಾಗಿ ತನ್ನ ಒರಟುತನದಿಂದ ರೌಡಿ ಆಗುತ್ತಾನೆ. ದೊಡ್ಡವರಾಗಿದ್ದಾರೆ ಅವರಿಬ್ಬರೂ ಒಂದೇ ಸೂರಿನಡಿಯಲ್ಲಿ ಬಂದಾಗ ಉಂಟಾಗುವಂತಹ ತಾಕಲಾಟಗಳ ಹೂರಣವೇ ಕಥೆಯ ಸ್ವಾರಸ್ಯ.

◆ **ಎರಡರಲ್ಲಿ ನೀವು ಯಾವ ಪಾತ್ರ ಪ್ರೀತಿ ಮಾಡುತ್ತೀರಿ?**

ಕಿರುತೆರೆಯ ವೃತ್ತಿ ಜೀವನದಲ್ಲಿ ಇದು ನನಗೆ ಮೂರನೇ ಧಾರಾವಾಹಿ. ತಮಿಳಿನ ಸ್ಟಾರ್ ವಿಜಯ್‌ದಿಂದ ಆರಂಭ. ಅಲ್ಲೂ ಡಾಕ್ಟರಾಗಿ ಅಭಿನಯಿಸಿದ್ದೆ. ಸ್ಟಾರ್ ಮಾ ಎನ್ನುವ ತೆಲುಗು ವಾಹಿನಿಯಲ್ಲಿಯೂ ಸ್ವಭಾವತಃ ಮೃದು ಸ್ವಭಾವದ ಹುಡುಗನ ಪಾತ್ರ ಮಾಡಿದ್ದೆ. ಕನ್ನಡದ ಸ್ಟಾರ್ ಸುವರ್ಣದಲ್ಲಿ ಈಗ ಪ್ರವೇಶ ಮಾಡಿದ್ದೇನೆ. ಇಲ್ಲಿ ಮೊದಲ ಎರಡು ಪಾತ್ರದಂತಹ ವಿಜಯ್ ಜೊತೆಗೆ ಅದಕ್ಕಿಂತ ಭಿನ್ನ ಇರುವ ಅಜಯ್ ಪಾತ್ರವನ್ನೂ ನಿರ್ವಹಿಸುತ್ತಿದ್ದೇನೆ. ಅಜಯ್ ಪಾತ್ರವೇ ನನಗೆ ಇಷ್ಟ. ಇದು ಒಂದು ರೀತಿಯಲ್ಲಿ ನಟ ಶಂಕರ್‌ನಾಗ್ ಅವರ 'ಹೊಸಜೀವನ'ದ ನಾಯಕನಂತಿದೆ. ನನಗಿದು ಏಕಾತನತೆಯಿಂದ ಹೊರತಂದಿದೆ. ಪಾತ್ರ ಅನೇಕ ಗುಣವಿಶೇಷಣಗಳ ಏರಿಳಿತದಿಂದಾಗಿ ಹೆಚ್ಚು ಆಪ್ಯಾಯ ಎಂದೆನಿಸುತ್ತದೆ.

◆ **ಏಕಕಾಲಕ್ಕೆ ಎರಡು ಪಾತ್ರಗಳಲ್ಲಿ ನಟಿಸುವುದು ಗೊಂದಲ ಹುಟ್ಟಿಸುವುದಿಲ್ಲವೇ?**

ತುಂಬ ಸವಾಲಿನ ಕೆಲಸ. ಗೊಂದಲಗಳು ಉಂಟಾಗುತ್ತವೆ. ಕಿರುತೆರೆಯಲ್ಲಿ ಈ ಪ್ರಯೋಗವೇ ಭಿನ್ನ. ಸಣ್ಣಪುಟ್ಟ ಪಾತ್ರಗಳನ್ನು ದ್ವಿಪಾತ್ರದಲ್ಲಿ ತರಲಾಗಿದೆ. 'ಅಕ್ಕ'ದಲ್ಲಿ ಅಂತಹ ಪ್ರಯತ್ನ ಮಾಡಿದ್ದಾರೆ. ಕನ್ನಡ ಧಾರಾವಾಹಿಯಲ್ಲಿ ನಾಯಕ ದ್ವಿಪಾತ್ರದಲ್ಲಿ ಅಭಿನಯಿಸುತ್ತಿರುವುದು ಇದೇ ಮೊದಲು. ಇಲ್ಲಿನ ಎಲ್ಲ ಪಾತ್ರಗಳ ಜೊತೆಯೂ ನಾನೇ ವ್ಯವಹರಿಸಬೇಕಿದೆ. ಅಜಯ್ ಆಗಿಯೋ ವಿಜಯ್ ಆಗಿಯೋ ಕ್ಷಣವೂ ಬಿಡುವಿಲ್ಲದೆ ಕೆಲಸ ಮಾಡಬೇಕು. ತಾಂತ್ರಿಕವಾಗಿಯೂ ಕಷ್ಟ ಇದೆ. ದಿನಕ್ಕೆ ಏಳೆಂಟು ಸೀನ್‌ಗಳನ್ನು ಮಾಡಬೇಕು. ಸಂಜೆ ಎನ್ನುವಷ್ಟರಲ್ಲಿ ಪಾದಗಳು ಪದ ಹಾಡುತ್ತಿರುತ್ತವೆ. ಇಂತಹ ಶ್ರಮದಲ್ಲಿಯೂ ಆನಂದ ಇದೆ.

◆ **ನೀವು ಸಾಗಿಬಂದ ಹಾದಿಯನ್ನು ಒಮ್ಮೆ ತಿರುಗಿ ನೋಡಿದರೆ ಏನು ಕಾಣುತ್ತೀರಿ?**

ಶಿವಮೊಗ್ಗದಲ್ಲಿ ಬೆಳೆದಿದ್ದು. ತಂದೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಮನೆ ಪೊಲೀಸ್ ವಸತಿ ಸಮುಚ್ಛಯದಲ್ಲಿತ್ತು. ಅಲ್ಲಿ ಹುಡುಗರ ಸಹವಾಸ ಜಾಸ್ತಿ. ಅಕ್ಕಪಕ್ಕದಲ್ಲಿ ತುಂಬ ಮನೆಗಳು ಇದ್ದಿದ್ದರಿಂದ. ಗೆಳೆಯರ ಬಳಗ ದೊಡ್ಡದಿತ್ತು. ಶಾಲೆಯ ರಜೆ ದಿನಗಳು ಮನೆಗಿಂತ ಮೈದಾನದಲ್ಲಿಯೇ ಇದ್ದಿದ್ದು ಹೆಚ್ಚು. ಆಡಿದ ಅಂಗಳದ ಆಟಗಳು ಒಂದೆರಡಲ್ಲ. ಕೊಕ್ಕೊ– ಕ್ರಿಕೆಟ್ ನನ್ನ ನೆಚ್ಚಿನ ಆಟಗಳಾಗಿದ್ದವು. ಶಾಲಾ ಕ್ರೀಡಾ ಸ್ಪರ್ಧೆಯಲ್ಲಿಯೂ ಭಾಗವಹಿಸುತ್ತಿದ್ದೆ. ಪದವಿಗೆ ಬರುವ ಹೊತ್ತಿಗೆ ಆಟಗಳೆಲ್ಲ ನಿಂತವು. ಭವಿಷ್ಯದ ಆತಂಕದಲ್ಲಿ ಓದು ಮುಗಿಸಿದೆ. ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಆರಂಭಿಸಿದೆ. ನಂತರ ಕೆಲಸ ಬೇಸರ ಅನ್ನಿಸಿ ಎಂಟೆಕ್ ಮಾಡಿದೆ. ದಾವಣಗೆರೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕೆಲಸ ಆರಂಭಿಸಿದೆ. ಗೌರವಯುತವಾದ ಕೆಲಸ ಎಂದು ನಾನು ಮತ್ತು ನನ್ನ ಪೋಷಕರು ಹೆಮ್ಮೆಪಟ್ಟಿದ್ದೆವು. ಫೇಸ್‌ಬುಕ್‌ನಲ್ಲಿ ಫೋಟೊ ಹಾಕ್ತಾ ಇದ್ದೆ. 'ಒನ್ ಟೈಮ್' ಸಿನಿಮಾ ನಿರ್ದೇಶಕ ರಾಜು ಪರಿಚಯ ಆದರು. ಅವರು ಭಗವಾನ್, ಕೆ.ಎಸ್.ಎಲ್. ಸ್ವಾಮಿ, ನಾಗೇಂದ್ರ ಪ್ರಸಾದ್, ನಾಗೇಂದ್ರ ಅರಸ್, ಟಿ.ಎಸ್. ನಾಗಾಭರಣ ಸೇರಿದಂತೆ 15 ಮಂದಿ ನಿರ್ದೇಶಕರನ್ನು ಸಹನಟರನ್ನಾಗಿ ಮಾಡಿಕೊಂಡು ಸಿನಿಮಾ ಮಾಡುತ್ತಿದ್ದರು. ಅದರಲ್ಲಿ ನನಗೆ ಪ್ರಧಾನ ಪಾತ್ರ ನೀಡಿದ್ದರು. ಅದಕ್ಕಾಗಿ ಕೆಲಸ ಬಿಟ್ಟು ಬಂದಿದ್ದೆ. ಆಗ ಪೋಷಕರಲ್ಲಿ ಆತಂಕ ಮನೆ ಮಾಡಿತು. ಚಿತ್ರ ನಿರೀಕ್ಷಿಸಿದಂತೆ ಯಶಸ್ಸು ಆಗಲಿಲ್ಲ. ಅಷ್ಟರಲ್ಲಿ ತಮಿಳಿನಲ್ಲಿ 'ಕಲ್ಯಾಣಂ ಕಲ್ಯಾಣಂ' ಮಾಡಿದೆ. ನಂತರ ತೆಲುಗಿನಲ್ಲಿ 'ಮನಸ್ಸೆ ಮನಸ್ಸೆ' ಮಾಡಿದೆ. ಇವು ಯಶಸ್ವಿ ಆಗುವ ತನಕ ಪೋಷಕರು ಆತಂಕಪಡುತ್ತಿದ್ದರು. ಈಗ ಸಂಜೆ ಆರೂವರೆ ಆಗುವುದನ್ನು ಕಾಯುತ್ತಾ ಕುಳಿತು ಅವರೇ ನೋಡುತ್ತಿದ್ದಾರೆ. ಆರ್ಥಿಕವಾಗಿ ಸುರಕ್ಷಿತ ಎನ್ನುವ ಕೆಲಸ ಬಿಟ್ಟು ಬೇರೆ ಇನ್ನೇನೋ ಮಾಡಲು ಹೊರಟರೆ ಪೋಷಕರು ವಿರೋಧ ಮಾಡುವುದು ಸಹಜ. ನಾನೊಬ್ಬನೆ ಮಗ ಆಗಿದ್ದರಿಂದ ನಮ್ಮ ಪೋಷಕರು ಒಂದಿಷ್ಟು ಹೆಚ್ಚು ಚಿಂತಿತರಾಗಿದ್ದರು ಎಂದೆನಿಸುತ್ತದೆ. ಇದು ಬಹುತೇಕ ಎಲ್ಲರ ಕುಟುಂಬದಲ್ಲಿ ಎದುರಾಗುವ ಸಮಸ್ಯೆ. ನಾನು ಅದನ್ನು ಜಯಿಸಿದ್ದೇನೆ ಎಂದು ಅನ್ನಿಸುತ್ತದೆ.

◆ **ಮುಂದಿನ ದಾರಿಯ ಬಗ್ಗೆ ಏನು ಯೋಚನೆ ಇದೆ?**

ಪರಭಾಷೆಯ ಮೂಲಕ ಕನ್ನಡಕ್ಕೆ ಬಂದಿದ್ದೇನೆ. ನನ್ನ ಜೀವನದಲ್ಲಿ ಒಂದು ರೀತಿಯಲ್ಲಿ ಉಲ್ಟಾ ಆಗಿದೆ. ಬಣ್ಣದ ಲೋಕದಲ್ಲಿ ಈಗ ಸಂಪರ್ಕಗಳು ಚೆನ್ನಾಗಿವೆ. ಮುಂದೆ ಏನು ಎಂದು ಯೋಚಿಸಲು ಸಮಯ ಇಲ್ಲದಷ್ಟು ಕೆಲಸದ ಒತ್ತಡದಲ್ಲಿ ಇದ್ದೇನೆ. ಮುಂದೆ ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ. ಇನ್ನೂ ಒಂದು ವರ್ಷದ ತನಕ ಅದಕ್ಕೆ ಸಮಯ ಇಲ್ಲ. ಆದರೂ ಆ ಬಗ್ಗೆ ಸ್ನೇಹಿತರೆಲ್ಲ ಸೇರಿ ಯೋಜನೆಯನ್ನು ಮಾಡುತ್ತಿದ್ದೇವೆ.

■ **ರಾಘವೇಂದ್ರ ಕೆ.**